# "ಇವರು–ಮೈಸೂರು ತಾತಯ್ಯನವರು ಸಮಾಜಕ್ಕೆ ಸೃಷ್ಟಿಸಿದ ಆಸ್ತಿ"

**ಲೇಖನ–ಮೂಲ: ಸಿ.ವಿ.ಗೋಪಿನಾಥ್**

**ಭಾವಾನುವಾದ: ಕುಸುಮ ಸುರೇಶ್**

## ಹಳೆಯ ವಿದ್ಯಾರ್ಥಿಗಳು ಬಂದರು, ಆ ದಿನಗಳನ್ನು ನೆನಪಿಸಿಕೊಂಡರು, ಇತರರ ಒಡನಾಟದಲ್ಲಿ ನಲಿದರು, ಭಾವನೆಗಳ ಮಹಾಪೂರ ಬಂದಾಗ ಬಿಕ್ಕಿ ಬಿಕ್ಕಿ ಅತ್ತರು

ಮೈಸೂರಿನಲ್ಲಿ 'ಮೈಸೂರು ತಾತಯ್ಯ'ನವರ ಹೆಸರನ್ನು ಕೇಳರಿಯದವರಿಲ್ಲ. ಸುಮಾರು ೧೩೫ ವರ್ಷಗಳಿಂದ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆಸರೆಯಾಗಿರುವ ಮೈಸೂರಿನ ಅನಾಥಾಲಯ ಸಂಸ್ಥೆಯನ್ನು ಹುಟ್ಟು ಹಾಕಿದಂತಹ ಪ್ರಾತಃಸ್ಮರಣೀಯರಿವರು. ಸುಪ್ರಸಿದ್ಧ ಲೇಖಕರು, ಸರಸ್ವತಿಸಮ್ಮಾನ ಪ್ರಶಸ್ತಿ ಪುರಸ್ಕೃತರೂ ಆದ ಎಸ್ ಎಲ್ ಭೈರಪ್ಪನವರು, ಮಾಜಿ ಮುಖ್ಯ ಕಾರ್ಯದರ್ಶಿಗಳು ಹಾಗೂ ಐಎಎಸ್ ಅಧಿಕಾರಿಗಳು ಆದ ಶ್ರೀ ಸಿ ನರಸಿಂಹಮೂರ್ತಿಯವರು ಮತ್ತು ಭಾರತ ಸರ್ಕಾರದ ಮಾಜಿ ಹೆಚ್ಚುವರಿ ಕಾರ್ಯದರ್ಶಿಗಳು ಹಾಗೂ ಪ್ರಸ್ತುತ ಅಧ್ಯಕ್ಷರು ಆದ ಶ್ರೀ ಸಿ ವಿ ಗೋಪಿನಾಥ್ ಇವರುಗಳನ್ನು ಪೋಶಿಸಿ ಬೆಳೆಸಿದ ತಾಣ ಇದು. 'ಮೈಸೂರು ತಾತಯ್ಯ' ಎಂದೇ ಚಿರಪರಿಚಿತರಾದ ಶ್ರೀ ಮಗ್ಗೆ ವೆಂಕಟಕೃಷ್ಣಯ್ಯನವರ ೧೮೧ನೇ ಜನ್ಮದಿನೋತ್ಸವವನ್ನು ಅವರೇ ಹುಟ್ಟು ಹಾಕಿದಂತಹ ಅನಾಥಾಲಯ ಸಂಸ್ಥೆಯು **೨೦೨೫ರ ಸೆಪ್ಟೆಂಬರ್** ೭ ರಂದು ಅರ್ಥಪೂರ್ಣವಾಗಿ ಆಚರಿಸಲು ಯೋಜಿಸಿದೆ. ತಾತಯ್ಯನವರ ೧೮೧ನೇ ಜನ್ಮದಿನೋತ್ಸವದ ಅಂಗವಾಗಿ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಅಂತರ ವಿದ್ಯಾರ್ಥಿನಿಲಯಗಳ ನಡುವೆ ಹಲವು ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಮೊದಲಬಾರಿಗೆ, ತಾತಯ್ಯನವರ ದಿನಾಚರಣೆಯ ಅಂಗವಾಗಿ ರಕ್ತದಾನ ಶಿಬಿರವನ್ನೂ ಸಹ ಆಡಳಿತ ಮಂಡಳಿಯ ಸದಸ್ಯರಾದ ಡಾ ಎನ್ ಶ್ರೀರಾಮ್ ಅವರ ನೇತೃತ್ವದಲ್ಲಿ ಆಯೋಜಿಸಲಾಗಿತ್ತು.

ಈ ವರ್ಷ ವಿಶೇಷವೆಂದರೆ ಆಲಯದ ಹಳೆಯ ವಿದ್ಯಾರ್ಥಿಗಳನ್ನು ಒಂದೆಡೆ ಒಟ್ಟುಗೂಡಿಸಿ ಶೃಂಗ ಸಭೆ ನಡೆಸಿ ವಿಚಾರ ಮಂಥನ ನಡೆಸಿದ ಶ್ರೇಯ ಇಂದಿನ ಆಡಳಿತ ಮಂಡಳಿಗೆ ಸಲ್ಲಬೇಕು.

ಹಳೆಯ ವಿದ್ಯಾರ್ಥಿಗಳ ಈ ಸಂಗಮ ದಿನಾಂಕ ಆಗಸ್ಟ್ ೧೦ ರಂದು ಏರ್ಪಡಿಸಿದ್ದು, ಈ ಸಭೆಯಲ್ಲಿ ಸಂತಸ ಸಂಭ್ರಮದಿಂದ ಇದ್ದ ಎಲ್ಲರೂ ತಮ್ಮ ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಹಂಚಿಕೊಂಡರು,ತಮ್ಮ ನೆನಪು, ಅನುಭವಗಳನ್ನು ಮೆಲುಕು ಹಾಕಿದರು ಹಾಗೂ ಸಂಸ್ಥೆಯ ಇನ್ನೂ ಉತ್ತಮ ಆಡಳಿತಕ್ಕಾಗಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡುವ ಮೂಲಕ ಒಕ್ಕೂಟದ ಶಕ್ತಿಯನ್ನು ತೋರಿದರು.

ಇಂತದ್ದೊಂದು ಚೆಂದದ ಸಭೆಯನ್ನು ಆಯೋಜಿಸಿದ್ದ ಹಳೇಯ ವಿದ್ಯಾರ್ಥಿ, ಅನಾಥಾಲಯದ ಇಂದಿನ ಉಪಾಧ್ಯಕ್ಷರು ಹಾಗೂ ದಿನೇಶ್ ಕೋಚಿಂಗ್ ಸೆಂಟರ್ ನ ಸ್ಥಾಪಕರಾದ ಶ್ರೀ ಏನ್ ವಿ ದಿನೇಶ್‌ರವರು ಅನಾಥಾಲಯ ಹೇಗೆ ವಿದ್ಯಾರ್ಥಿಗಳಿಗೆ ಆಶ್ರಯವನ್ನಿತ್ತು,ಅವರ ಬದುಕನ್ನು ಸಮರ್ಥವಾಗಿ ನಿಭಾಯಿಸುವಂತೆ ಸದೃಢರನ್ನಾಗಿಸುತ್ತಿದೆ ಎಂಬುದರ ಕುರಿತು ಮಾತನಾಡಿದರು.ಅಷ್ಟೇ ಅಲ್ಲದೆ ತಾವು ಅನಾಥಾಲಯಕ್ಕೆ ಬಂದಾಗ ಸಂಸ್ಥೆಯಿಂದ ಕಲಿತಂತಹ ಮಾನವೀಯ ಮೌಲ್ಯಗಳು, ವ್ಯಕ್ತಿತ್ವ ನಿರ್ಮಾಣದಂತಹ ಅಮೂಲ್ಯ ಪಾಠಗಳು ತಮಗೆ ಹೇಗೆ ಸಹಕಾರಿಯಾಯಿತು ಎಂಬುದನ್ನು ಸ್ಮರಿಸಿದರು.ಬಹುಶಹ ಅನಾಥಾಲಯದ ಅನುಭವದ ಮೂಸೆಗೆ ಒಳಪಡಿಸಿಕೊಂಡು ಕರಗಿ ಹೋಗದಿದ್ದಲ್ಲಿ ಸಮಾಜದಲ್ಲಿ ಉನ್ನತ ಸ್ತರಕ್ಕೇರಲು ಸಾಧ್ಯವಾಗುತ್ತಿರಲಿಲ್ಲವೆಂಬ ಸಂಗತಿಯನ್ನು ಹೇಳುವಾಗ ಅವರ ಧ್ವನಿಯಲ್ಲಿ ಅನಾಥಾಲಯದ ಬಗ್ಗೆ ಇದ್ದ ಹೆಮ್ಮೆ ಎದ್ದುಕಾಣುತ್ತಿತ್ತು. ಭಾಗಿಗಳಾಗಿದ್ದ ೪೦ ಹಳೆಯ ವಿದ್ಯಾರ್ಥಿಗಳ ಅಂದಿನ ಒಡನಾಟದ ಕೆಲವು ತುಣುಕುಗಳ ವಿಹಂಗಮ ನೋಟ ಈ ಲೇಖನದಲ್ಲಿ ಬಿತ್ತರಿಸಲಾಗಿದೆ.

- ೧೯೬೦-೬೪ರ ನಡುವೆ ಫಲಾನುಭವಿಗಳಾದ ವಿಜ್ಞಾನ ಶಿಕ್ಷಕರಾಗಿ ಕಾರ್ಯನಿರ್ವಹಿಸಿ ನಂತರದಲ್ಲಿ ಸ್ನಾತಕೋತ್ತರ ಪದವಿ ಪಡೆದು ಸರ್ಕಾರಿ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ನಿವೃತ್ತಿ ಹೊಂದಿದ ಶ್ರೀ ಕೆ ಭುಜಂಗ ರಾವ್ ರವರು ನಿತ್ಯವೂ ತಾತಯ್ಯನವರನ್ನು ಹೇಗೆ ಸ್ಮರಿಸಿಕೊಳ್ಳುತ್ತಿದ್ದರು ಎಂಬುದನ್ನು ತಿಳಿಸುತ್ತಾ ಅವರ ೮೧ನೇ ವಯಸ್ಸಿನಲ್ಲಿ ಕೂಡ ನಿತ್ಯದ ಪೂಜೆ ಆರಂಭವಾಗುತ್ತಿರುವುದೇ 'ಓಂ ನಮೋ ತಾತಯ್ಯ' ಎಂಬ ಮಂತ್ರದಿಂದ, ಎಂದು ಹೇಳುವಾಗ ಸಭೆಯಲ್ಲಿ ಧನ್ಯತೆಯ ಭಾವ ಕಾಣುತ್ತಿತ್ತು.
- ಅನಾಥಾಲಯದಲ್ಲಿದ್ದುಕೊಂಡೆ (೧೯೯೦-೯೩) ಬಿ.ಎಸ್ಸಿ ಪದವಿ ಪಡೆದು ಆರಂಭದಲ್ಲಿ ಸರ್ಕಾರಿ ಸೇವೆಗೆ ಸೇರಲಿಚ್ಚಿಸದಿದ್ದರೂ,ನಂತರ ಭಾರತೀಯ ರೈಲ್ವೆಯಲ್ಲಿ ಮುಖ್ಯ ಲೋಕೋ ಪೈಲೆಟ್ ಆಗಿ ಕಾರ್ಯನಿರ್ವಹಿಸಲಾರಂಬಿಸಿದ ಶ್ರೀ ರವಿಶಂಕರ್ ರವರು ಅನಾಥಾಲಯದಿಂದ ತಾವು ಗಳಿಸಿದ ಮಹತ್ತರ ಗುಣಗಳ ಬಗ್ಗೆ ಹೇಳಿದರು.ಪ್ರಾರ್ಥಿಸುವುದು ಹೇಗೆ? ಮನಃ ಶಾಂತಿಯನ್ನು ಪಡೆಯುವುದು ಹೇಗೆ?ಶಿಸ್ತಿನಿಂದ ಇರುವುದು ಹೇಗೆ?ಎಲ್ಲದಕ್ಕಿಂತ ಮಿಗಿಲಾಗಿ ಧೂಮಪಾನವನ್ನು ಬಿಟ್ಟು ಬದುಕುವುದು ಹೇಗೆ?ಎಂಬುದನ್ನೆಲ್ಲ ಕಲಿಸಿಕೊಟ್ಟ ಅನಾಥಾಯಕ್ಕೆ ನಾನು ಆಭಾರಿಯಾಗಿದ್ದೇನೆ ಎನ್ನುವಾಗ ಅವರ ಕಣ್ಣುಗಳು ತುಂಬಿ ಬಂದಿದ್ದವು.ಅನಾಥಾಲಯದ ಪ್ರವೇಶಕ್ಕೆ ಎಷ್ಟು ನಿಷ್ಪಕ್ಷಪಾತವಾಗಿ ಆಯ್ಕೆ ನಡೆಯುತ್ತಿತ್ತು ಎಂಬುದನ್ನು ಸ್ಮರಿಸಿದ ಅವರು ಈಗಿರುವ ವಿದ್ಯಾರ್ಥಿಗಳಿಗೆ ಅನಾಥಾಲಯಕ್ಕೆ ಹೆಮ್ಮೆ ತರುವಂತಹವರಾಗಿ,ಸಮಾಜದಿಂದ ಗಳಿಸಿಕೊಂಡಿದ್ದನ್ನು ಮತ್ತೆ ಸಮಾಜಕ್ಕೆ ಕೊಡುಗೆಯಾಗಿ ನೀಡಿ ಎಂಬ ಕಿವಿಮಾತುಗಳನ್ನು ಹೇಳಿದರು.
- ಮತ್ತೊಬ್ಬ ಮಹನೀಯರು ಶ್ರೀ ಸುಬ್ರಹ್ಮಣ್ಯಂ ರವರು (೧೯೮೪-೮೭)ಮೆಕಾನಿಕಲ್ ಇಂಜಿನಿಯರಿಂಗ್ ಮುಗಿಸಿ, ಭಾರತೀಯ ರಕ್ಷಣಾ ಸೇವೆಗೆ ಸೇರಿ ಭಾರತದ ರಾಷ್ಟ್ರಪತಿ ಪದಕ ಪಡೆದಂತವರು.ತಮ್ಮ ನಿವೃತ್ತಿಯ ನಂತರ ಪ್ರಮುಖ ಬ್ಯಾಂಕ್ ಒಂದರ ರಕ್ಷಣಾ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿರುವ ಇವರು ಅನಾಥಾಲಯ ಹೇಗೆ ತಮ್ಮಲ್ಲಿ ಶಿಸ್ತು,

ಸಂಯಮ ಹಾಗೂ ಸಮರ್ಪಣಾ ಭಾವವನ್ನು ಹುಟ್ಟು ಹಾಕಿತು ಎಂಬುದನ್ನು ಸ್ಮರಿಸಿದರು.

- ಅನಾಥಾಲಯದಲ್ಲಿ ೧೯೭೩-೭೫ ರಅವಧಿಯಲ್ಲಿದ್ದ ಯು.ಜಿ ಗಣೇಶ್ ರವರು ಮೈಸೂರು ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯನ್ನು ನಾಲ್ಕನೇ ರಾಂಕ್ ನೊಂದಿಗೆ ಗಳಿಸಿದವರು. ಅಷ್ಟೇ ಅಲ್ಲದೆ ಮಂಗಳೂರು ವಿಶ್ವವಿದ್ಯಾಲಯದಿಂದ ಪಿ ಎಚ್ ಡಿ ಪದವಿ ಪಡೆದಂತವರು. ಅವರು ಕೂಡ ತಾವು ಅನಾಥಾಲಯದಿಂದ ಕಲಿತ  ಚರ್ಚಾ ಕುಶಲತೆಯ ಸಾಮರ್ಥ್ಯಗಳು,ಸಾಧಿಸಬೇಕೆಂಬ ಛಲ, ಚುರುಕುತನಗಳು ತಮ್ಮ ಬದುಕಿಗೆ ಎಷ್ಟು ಅಮೂಲ್ಯ ಕೊಡುಗೆಗಳನ್ನಿತ್ತವು ಎಂಬುದನ್ನು ನೆನಪಿಸಿಕೊಂಡರು.
- “ನಾವೆಲ್ಲ ಇದ್ದಂತಹ ಅನಾಥಾಲಯದಲ್ಲಿ ವರ್ಷಕ್ಕೊಮ್ಮೆಯಾದರೂ ಹಳೆಯ ವಿದ್ಯಾರ್ಥಿಗಳ ಸಭೆಯನ್ನು ಏರ್ಪಡಿಸಲೇಬೇಕೆಂಬ ಇಚ್ಚೆಯನ್ನು ವ್ಯಕ್ತಪಡಿಸಿದವರು, ೧೯೮೭ - ೯೨ರ ನಡುವೆ ಅನಾಥಾಲಯದಲ್ಲಿದ್ದು ಸಂಸ್ಥೆಯ ಬಗ್ಗೆ ಕೃತಜ್ಞತಾ ಭಾವವನ್ನು ಹೊಂದಿರುವವರು ಅಶೋಕ್ ಹೆಗಡೆಯವರು.”
- ಅನಾಥಾಲಯದ ಆಶ್ರಯದಲ್ಲಿದ್ದು ಖ್ಯಾತ ವಿಜ್ಞಾನಿಗಳಾಗಿ ರೂಪುಗೊಂಡ ಇಬ್ಬರು ಹಿರಿಯರು ಅಂದಿನ ಸಭೆಯಲ್ಲಿದ್ದುದ್ದು ಸ್ತುತ್ಯಾರ್ಹ.ಪರಮಾಣು ವಿಜ್ಞಾನಿಗಳಾದ ಡಾ.ಗುರುಮೂರ್ತಿಯವರು (೧೯೬೯-೮೪), BARC ಮತ್ತು R.M.P ಯಲ್ಲಿ ಹಿರಿಯ ವಿಜ್ಞಾನಿಗಳ ಹುದ್ದೆಯಲ್ಲಿದ್ದಂತವರು.ಹಾಗೂ ಶ್ರೀ ಕಾಶಿನಾಥ್ ರವರು ಕಂಪ್ಯೂಟರ್ ಸೈನ್ಸ್ ನಲ್ಲಿ ಇಂಜಿನಿಯರಿಂಗ್ ಪದವಿ ಪಡೆದು ರಕ್ಷಣಾ ಸಂಶೋಧನಾ ಅಭಿವೃದ್ಧಿ ಸಂಸ್ಥೆ (DRDO)ಯೊಂದಿಗೆ ’ಆಕಾಶ್’ಯೋಜನೆಯಲ್ಲಿ ಹಿರಿಯ ಸಂಶೋಧನಾ ವಿಜ್ಞಾನಿಗಳಾಗಿ ಕಾರ್ಯನಿರ್ವಹಿಸಿದವರು. ಸಂಸ್ಥೆಯು ಇಂತಹ ಪ್ರತಿಭಾವಂತ ವ್ಯಕ್ತಿತ್ವಗಳನ್ನು ಹುಟ್ಟು ಹಾಕಿರುವುದು ನಿಜಕ್ಕೂ ನಾವೆಲ್ಲರೂ ಹೆಮ್ಮೆಪಡುವಂತಹ ಸಂಗತಿ.

  ತಮಗೆ ಸ್ವಾಭಿಮಾನ,ಛಲಗಳನ್ನು ಕಲಿಸಿ,ಗುರಿ ಮುಟ್ಟಲು ಸಹಕರಿಸಿದ ಅನಾಥಾಲಯಕ್ಕೆ ಡಾ.ಗುರುಮೂರ್ತಿಯವರು ತಮ್ಮ ನಿವೃತ್ತಿಯ ದಿನದಂದೇ ಪಿಂಚಣಿಯ ಭಾಗದಿಂದ ಒಳ್ಳೆಯ ಮೊತ್ತವನ್ನು ಕಾಣಿಕೆಯಾಗಿ ನೀಡಿದ್ದನ್ನು ಈ ಸಂದರ್ಭದಲ್ಲಿ ಅನಾಥಾಲಯದ ಅಧ್ಯಕ್ಷರಾದ ಶ್ರೀ ಸಿ ವಿ ಗೋಪಿನಾಥ್ ರವರು ಸ್ಮರಿಸಿದರು.
- ಇನ್ಫೋಸಿಸ್ ನಲ್ಲಿ  ಕಾರ್ಯನಿವಹಿಸುತ್ತಿರುವಂತ  ಮತ್ತೊಬ್ಬ ಹಿರಿಯ ವಿದ್ಯಾರ್ಥಿಯಾದ ಶ್ರೀ ಕಾಶಿನಾಥ್ ರವರು ವಿದ್ಯಾರ್ಥಿಗಳು ತಮ್ಮ ಆರಂಭಿಕ ಹಂತವನ್ನು ಎಂದಿಗೂ ಮರೆಯಬಾರದು. ಸಮಾಜದಿಂದ ಪಡೆದದ್ದನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಬೇಕೆಂಬ ಕಿವಿಮಾತು ಹೇಳುವುದರೊಂದಿಗೆ ತಮಗೆ ಆಶ್ರಯ ನೀಡಿದ,ಜೀವನದ ಗುರಿ ತಲುಪಲು ಶಕ್ತಿ, ಸಾಮರ್ಥ್ಯಗಳನ್ನಿತ್ತ ಅನಾಥಾಲಯ ಹಾಗೂ ವಿಪ್ರರ ಕುಲದೇವತೆಯಾದ ಭಗವತಿ ’ಗಾಯತ್ರಿ ದೇವಿ’ಗೆ ಕೃತಜ್ಞತೆಗಳನ್ನರ್ಪಿಸಿದರು.
- ಉದ್ಯಮಿಗಳಾದ ಶ್ರೀ ರವೀಂದ್ರರವರು (೧೯೬೯-೮೪)ಪ್ರಸ್ತುತ ಆಡಳಿತ ಮಂಡಳಿಯ ಉತ್ತಮ ಹಾಗೂ ಸುಲಭವಾಗಿ ವಿದ್ಯಾರ್ಥಿಗಳಿಗೆ ಹಿರಿಯ ಸದಸ್ಯರೊಂದಿಗೆ ತಮ್ಮ ಸಮಸ್ಯೆಗಳ ಪರಿಹಾರಕ್ಕೆ, ಪರಸ್ಪರ ವಿಚಾರ ವಿನಿಮಯಕ್ಕೆ ಅವಕಾಶ ದೊರಕಿಸಿ ಕೊಡುತ್ತಿರುವುದನ್ನು ಪ್ರಶಂಸಿಸಿದರು.

- ಆಡಿಟರ್ ಆಗಿರುವ ಶ್ರೀ ಕೃಷ್ಣ ಪ್ರಸಾದ್ ರವರು ಸಾಧನೆಯ ಶಿಖರವನ್ನೇರುವ ಸಂದರ್ಭದಲ್ಲಿ ನಮಗೆ ಉತ್ಸಾಹ ಮತ್ತು ಶಕ್ತಿಯನ್ನು ತುಂಬುತ್ತಿದ್ದ ಅನಾಥಾಲಯ ಮತ್ತು ಅದರ ಸವಿನೆನಪುಗಳನ್ನು ಸ್ಮರಿಸುತ್ತಾ ಕೃತಜ್ಞತೆ ಅರ್ಪಿಸಿದರೆ ,
- ಹೆಣ್ಣು ಮಕ್ಕಳಾಗಿ ನಾವು ಹಣೆಗೆ ಕುಂಕುಮವನ್ನು ಇಟ್ಟುಕೊಳ್ಳುವುದರಿಂದ ಹಿಡಿದು ಎಲ್ಲಾ ರೀತಿಯ ಮೌಲ್ಯಗಳು,ಸಂಪ್ರದಾಯ,ಸಂಸ್ಕಾರವನ್ನು ಕಲಿಸಿದ್ದೇ ಅನಾಥಾಲಯ ಎಂಬುದನ್ನು ಶ್ರೀಮತಿ ಲಕ್ಷ್ಮಿ (೨೦೧೮-೧೯)ಯವರು ಸ್ಮರಿಸಿದರು.ಪ್ರತಿಭಾನ್ವಿತ ಹಾಗೂ ಉದಯೋನ್ಮುಖ ವಕೀಲೆ ಪೃಥ್ವಿ ಭಟ್ ತಾನು ರಾಜ್ಯಮಟ್ಟದ ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಿ ಗೆದ್ದಂತಹ ೧೫೦೦೦ ನಗದು ಬಹುಮಾನದಲ್ಲಿ ೧೦೦೦ ರೂಗಳನ್ನು, ಹಾಗೂ ಬಾರ್ ಕೌನ್ಸಿಲ್ ನಲ್ಲಿ ನೋಂದಾಯಿಸಿಕೊಂಡು ವಕೀಲೆಯಾಗಿ ಕಾರ್ಯನಿರ್ವಹಿಸಿದ ಮೊದಲ ೧೦ ದಿನದ ಸಂಬಳ ೭೫೦೦ ರೂಗಳಲ್ಲಿ ೧೦೦೦ರೂ ಗಳನ್ನುಅನಾಥಾಲಯಕ್ಕೆ ದೇಣಿಗೆಯಾಗಿ ನೀಡಿದ್ದನ್ನು ಸಂಸ್ಥೆಯ ಅಧ್ಯಕ್ಷರು ಪ್ರೀತಿಯಿಂದ ಸ್ಮರಿಸಿದರು.ಹೌದು,ನಾವು ಎಷ್ಟು ದೇಣಿಗೆಯಿತ್ತೆವು ಎಂಬುದು ಮುಖ್ಯವಲ್ಲ.ನಮ್ಮ ಮಾತೃ ಸಂಸ್ಥೆಗಾಗಿ ಏನನ್ನಾದರೂ ಕೊಡಲೇಬೇಕೆಂಬ ಕೃತಜ್ಞತಾ ಭಾವಕ್ಕೆ ಯಾರಾದರೂ ತಲೆಬಾಗಲೇಬೇಕು.
- ಅನಾಥಾಲಯದಲ್ಲಿ ಆಶ್ರಯ ಪಡೆದಿದ್ದವರಲ್ಲಿ ಹಲವಾರು ಇಂಜಿನಿಯರ್ ಗಳು,ವೈದ್ಯರು, ವಿಜ್ಞಾನಿಗಳು,ಅರ್ಥಶಾಸ್ತ್ರಜ್ಞರು, ಲೆಕ್ಕ ಪರಿಶೋಧಕರುಗಳನ್ನೊಳಗೊಂಡಂತೆ ಹಲವು ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಆರು ವರ್ಷಗಳ ಕಾಲ ಅನಾಥಾಲಯದಲ್ಲಿದ್ದುಕೊಂಡು ಎಂಬಿಬಿಎಸ್ ಪದವಿಯನ್ನು ಪಡೆದು ಚಿಕ್ಕಮಗಳೂರು ಜಿಲ್ಲೆಯಲ್ಲಿ ದೊಡ್ಡ ಆಸ್ಪತ್ರೆಯೊಂದನ್ನು ನಡೆಸುತ್ತಿರುವ ಡಾ ಉದಯಶಂಕರ ರವರು ಎರಡು ವರ್ಷಗಳ ಹಿಂದೆ ಅನಾಥಾಲಯವು ತಾತಯ್ಯನವರ ದಿನಾಚರಣೆಯಂದು ಕೊಡಮಾಡುವ "ತಾತಯ್ಯ-ಶ್ರೀ ಫಲಾನುಭವಿ ಸಾಧಕ" ಪ್ರಶಸ್ತಿಯನ್ನು ಪಡೆದ ಮೊದಲಿಗರಾಗಿದ್ದಾರೆ ಎಂದು ಅನಾಥಾಲಯದಿಂದ ಅಧ್ಯಕ್ಷರು ಬಹಳ ಹೆಮ್ಮೆಯಿಂದ ಹೇಳಿದರು.
- ವೈದ್ಯರಾಗಿರುವ ಡಾ. ಕಾರ್ತಿಕ್ ಉಡುಪ (೧೯೯೪ - ೨೦೦೦) ರವರು, ಈ ಸಂಸ್ಥೆಯಲ್ಲಿ ಪ್ರವೇಶ ಪಡೆದುಕೊಳ್ಳುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಅರ್ಹತೆಯ ಆಧಾರದ ಮೇಲೆ ಪ್ರವೇಶ ನೀಡಲಾಗುತ್ತಿತ್ತು. "ನನಗೆ ಸ್ವಾಭಿಮಾನ, ಸಂಸ್ಕೃತಿ, ಸಂಸ್ಕಾರದ ಪಾಠವನ್ನು ಕಲಿಸಿದ್ದೆ ಅನಾಥಾಲಯ. ನಾನು ಅನಾಥಾಲಯದ ಆಶ್ರಯದಲ್ಲಿದ್ದವನು ಎಂದು ಹೇಳಿಕೊಳ್ಳಲು ಎಂದಿಗೂ ಹಿಂಜರಿಯುವುದಿಲ್ಲ" ಎಂದು ಎದೆ ತಟ್ಟಿ ನುಡಿದರು. ಇತ್ತೀಚೆಗೆ ಇವರನ್ನು ಅನಾಥಾಲಯದ ಆಡಳಿತ ಮಂಡಳಿಯ ಸದಸ್ಯರನ್ನಾಗಿಯೂ ನೇಮಿಸಿಕೊಳ್ಳಲಾಗಿದೆ.
- ಮೊದಲು ಊಟಕ್ಕಾಗಿ ವೇದ ಪಾಠ ಶಾಲೆಗೆ ಸೇರಿ, ನಂತರ ಅನಾಥಾಲಯದ ಆಶ್ರಯಕ್ಕೆ ಬಂದ ಶ್ರೀ ರಾಘವೇಂದ್ರರು 'ಈ ಸಂಸ್ಥೆಯಲ್ಲಿ ಶಿಸ್ತಿನ ಪಾಠವನ್ನು ಕಲಿತವರು ಮುಂದೆಂದು ತಮ್ಮ ಜೀವನದಲ್ಲಿ ಎಡವಲು ಸಾಧ್ಯವೇ ಇಲ್ಲ' ಎಂಬಂತಹ ಮಾತುಗಳಾಡಿದಾಗ ಅನಾಥಾಲಯದ ಬಗ್ಗೆ ಅವರಿಗಿದ್ದ ಭರವಸೆ ಎಂತಹದ್ದು ಎಂಬುದು ತಿಳಿದುಬಂದಿತು.

- ಪ್ರಸ್ತುತ ಅನಾಥಾಲಯದ ಉಪಾಧ್ಯಕ್ಷರಾಗಿರುವ ಶ್ರೀ ದಿನೇಶ್ ರವರು ಕೂಡ ಹಿಂದೊಂದು ದಿನ ಶಿವಮೊಗ್ಗದಿಂದ ಕಾಲೇಜು ಶಿಕ್ಷಣಕ್ಕಾಗಿ ಮೈಸೂರಿಗೆ ಬಂದು ಉಳಿದುಕೊಳ್ಳಲು ಸ್ಥಳಕ್ಕಾಗಿ ಹುಡುಕುತ್ತಿರುವಾಗ ಅವರಿಗೂ ಆಶ್ರಯದಾತನಾಗಿ ಮಡಿಲು ತೆರೆದಿದ್ದು ಇದೇ ಅನಾಥಾಲಯ . ಹೌದು ಇದೇ ಅನಾಥಾಲಯ ಇಂದು ಅವರನ್ನು ಸಂಸ್ಥೆಯ ಉಪಾಧ್ಯಕ್ಷರಾಗಿರುವ ಮಟ್ಟಕ್ಕೆ ಬೆಳೆಸಿದೆ.
- ಶೃಂಗೇರಿಯಿಂದ ಒಂದು ಸೀಮೆಎಣ್ಣೆ ಸ್ಟೌನೊಂದಿಗೆ ಮೈಸೂರಿಗೆ ಬಂದಿಳಿದ ರಾಮಮೂರ್ತಿಯವರು ತಾವು ಅನಾಥಾಲಯದ ಪ್ರವೇಶಕ್ಕಾಗಿ ೧೫ ದಿನಗಳು ಕಾದಿದ್ದನ್ನು ನೆನಪಿಸಿಕೊಳ್ಳುತ್ತಾರೆ. ನಂತರ ಚಾರ್ಟೆಡ್ ಅಕೌಂಟೆಂಟ್ ಆಗಿದ್ದು, ಎಂಬಿಎ ಪದವಿ ಪಡೆದಿದ್ದು ನಿಜಕ್ಕೂ ಸಾಧನೆಯ ಮಾತೇ ಸರಿ.
- ಮತ್ತೊಬ್ಬ ಹಿರಿಯ ವಿದ್ಯಾರ್ಥಿ ವಿಶ್ವನಾಥ (೧೯೮೬ – ೧೯೮೮). ಇವರು ಪದವಿಯ ನಂತರ KSRTC ಮತ್ತು BEML ನಲ್ಲಿ ಕೂಡ ಕಾರ್ಯನಿರ್ವಹಿಸಿ ಭ್ರಷ್ಟ ಪರಿಸ್ಥಿತಿಗೆ ಬೇಸತ್ತು ಸ್ವಯಂ ನಿವೃತ್ತಿ ಪಡೆದು ನಂತರ ಖಾಸಗಿ ಉದ್ಯಮಿಗಳಾಗಿ ವಿಶಿಷ್ಟ ಸಾಧನೆಗೈದಿದ್ದಾರೆ.
- ಹೀಗೆ ಅನಾಥಾಲಯದ ಆಶ್ರಯದಲ್ಲಿದ್ದು, ಇಂದು ದೇಶವಿದೇಶಗಳಲ್ಲಿ ,ವಿವಿಧ ಕ್ಷೇತ್ರಗಳಲ್ಲಿ, ತಮ್ಮ ಛಾಪನ್ನು ಮೂಡಿಸಿರುವಂತಹ ಹಲವಾರು ವಿದ್ಯಾರ್ಥಿಗಳಿದ್ದಾರೆ. ರಿಸರ್ವ್ ಬ್ಯಾಂಕಿನಲ್ಲಿರುವ ಶ್ರೀ ನಿತ್ಯಾನಂದ (೧೯೮೬–೯೦), ಉದ್ಯಮಿಗಳಾದ ರವೀಂದ್ರ (೧೯೭೯–೮೪), ಶ್ರೀ ನಾಗೇಂದ್ರ (೧೯೮೬–೮೭), ಸ್ಟಾರ್ಟ್ ಅಪ್ ಉದ್ಯಮಿಗಳಾದ ಪೃಥ್ವಿ ಶರ್ಮಾ (೨೦೧೯–೨೦೨೪), ಶ್ರೀ ಅಂಕಿತ್ (೨೦೨೩–೨೪).... ಹೀಗೆ ಹಲವಾರು ವಿದ್ಯಾರ್ಥಿಗಳು ಅನಾಥಾಲಯದ ಆಶ್ರಯ ಪಡೆದು, ಸಾಧನೆಗೈದು, ಸಂಸ್ಥೆ ಕಲಿಸಿದ ಶಿಸ್ತು, ಸಂಯಮ, ಸ್ವಾಭಿಮಾನ, ಸಂಸ್ಕೃತಿ, ಸಂಸ್ಕಾರ.... ಎಲ್ಲ ಗುಣಗಳನ್ನು ಮೈಗೂಡಿಸಿಕೊಂಡು ಸಮಾಜಕ್ಕೆ ಬೇಕೇ ಬೇಕೆನಿಸುವಂತಹ ಉತ್ತಮ ನಾಗರಿಕರಾಗಿದ್ದಾರೆ.

ಸಭೆಯಲ್ಲಿ ನೆರೆದಿದ್ದ ಪ್ರತಿಯೊಬ್ಬರೂ ತಮ್ಮ ನೆನ್ನೆಗಳನ್ನು ಮೆಲಕು ಹಾಕುತ್ತಾ, ತಮ್ಮನಾಳೆಗಳನ್ನು ಅದ್ಭುತವಾಗಿ ಸೃಷ್ಟಿಸಿಕೊಟ್ಟ 'ಅನಾಥಾಲಯ'ವನ್ನು ಬಹಳ ಹೆಮ್ಮೆಯಿಂದ, ಕೃತಜ್ಞತಾ ಭಾವದಿಂದ ಸ್ಮರಿಸುತ್ತಲೇ ಇದ್ದರು.

ಅನಾಥಾಲಯದ ಆಸ್ತಿ, ಸಂಪನ್ಮೂಲಗಳೆಂದರೆ ಅದುವೇ ಅನಾಥಾಲಯ ಆಶ್ರಯ ಕೊಟ್ಟಂತಹ ತನ್ನ ವಿದ್ಯಾರ್ಥಿಗಳು. ಅದೇ ವಿದ್ಯಾರ್ಥಿಗಳಿಂದ ಸಮಾಜದ, ರಾಷ್ಟ್ರದ ಬೌದ್ಧಿಕ, ಭೌತಿಕ, ಆರ್ಥಿಕ ಸಂಪನ್ಮೂಲ ವೃದ್ಧಿಯಾಗುತ್ತಿರುವುದು ಅವರ ವ್ಯಕ್ತಿತ್ವ, ಆದರ್ಶ, ಮೌಲ್ಯಗಳಿಗೆ ಹಿಡಿದ ಕನ್ನಡಿಯಾಗಿದೆ. ಅನಾಥಾಲಯದ ಅಧ್ಯಕ್ಷರು ಹಾಗೂ ಈ ಲೇಖನದ ಮೂಲ ಕರ್ತೃಗಳು ಆದಂತಹ ಶ್ರೀ ಸಿ ವಿ ಗೋಪಿನಾಥರು ಕೂಡ ಸಂಸ್ಥೆಯ ಹಿರಿಯವಿದ್ಯಾರ್ಥಿಯಾಗಿದ್ದು (೧೯೬೦–೬೧)ಸಂಸ್ಥೆಯು ಹೇಗೆ ಪ್ರಾಯೋಗಿಕವಾಗಿ ಮೌಲ್ಯಾಧಾರಿತ ಗುಣಗಳನ್ನು ಕಲಿಸಿತೆಂಬುದರ ಕುರಿತು ಉದಾಹರಣೆ ಸಹಿತ ತಿಳಿಸಿದ್ದು ಮನಮುಟ್ಟುವಂತಿತ್ತು.ವಿನಮ್ರತೆ ತನ್ನ ವ್ಯಕ್ತಿತ್ವದ ವಿಶೇಷ ಲಕ್ಷಣ ಎಂದು ಯಾರಾದರೂ ಗುರುತಿಸಿದರೆ ಅದಕ್ಕೆ ಮೂಲ ಕಾರಣ ನನಗೆ ಆಶ್ರಯವನ್ನಿತ್ತ ಈ ಅನಾಥಾಲಯ.ನನ್ನ ವಾಸ್ತವ್ಯದ ಸಂದರ್ಭದಲ್ಲಿ ನನಗಿದ್ದ ಕಷ್ಟಗಳಿಗೆಲ್ಲ ಹೆಗಲಾಗಿ ಪರಿಹರಿಸಿದ ಅನಾಥಾಲಯಕ್ಕೆ ನಾನು ಋಣಿಯಾಗಿದ್ದೇನೆ ಎಂದು ಹೇಳುತ್ತಾ ಅವರು

ಗದ್ಗದಿತರಾದಾಗ ನೆರೆದಿದ್ದ ಎಲ್ಲರ ಕಣ್ಣಂಚುಗಳು ತಮಗರಿಯದೆ ತೇವವಾಗಿದ್ದು ಮಾತ್ರ ಸುಳ್ಳಲ್ಲ. ಇಂತಹ ಆಶ್ರಯದಾತ ಸಂಸ್ಥೆಗೆ ತಮ್ಮ ಋಣವನ್ನು ಸ್ಮರಿಸುತ್ತಾ, ಸಂಸ್ಥೆಯ ಏಳಿಗೆಗೆ ನಾವು ಕಟಿಬದ್ಧರಾಗಿ ದುಡಿಯುತ್ತೇನೆ ಎನ್ನುವ ವಾಗ್ದಾನ, ಶೃಂಗ ಸಭೆಯ ಸಾರ್ಥಕತೆಯನ್ನು ಎತ್ತಿ ಹಿಡಿಯಿತು.

ಹಿರಿಯ ವಿದ್ಯಾರ್ಥಿಗಳು ತಾವು ಉಳಿದುಕೊಳ್ಳುತ್ತಿದ್ದ ಕೋಣೆಗಳನ್ನೊಮ್ಮೆ ಇಣುಕಿದಾಗ ಅದೇ ಗೋಡೆ ಅದೇ ಬಾಗಿಲುಗಳನ್ನೊಮ್ಮೆತಡವಿದಾಗ ಹಳೆಯ ನೆನಪುಗಳೆಲ್ಲ ಮರುಕಳಿಸಿ ಎಲ್ಲರ ಕಣ್ಣಾಲಿಗಳು ತುಂಬಿ ಬಂದವು.ಒಗ್ಗೂಡಿದಂತಹ ಎಲ್ಲರೂ ಮನದಾಳದಿಂದ ಅನಾಥಾಲಯದ ಏಳಿಗೆಗೆ ಅಭಿವೃದ್ಧಿಗೆ ಕಟಿಬದ್ಧರಾದಾಗ ಸಾರ್ಥಕ್ಯದ ಭಾವ ಹೊರಹೊಮ್ಮಿತ್ತು. ಅಂದು ಮಾತನಾಡಿದ ಎಲ್ಲಾ ವಿದ್ಯಾರ್ಥಿಗಳ ಚರ್ಚೆಯಲ್ಲಿ ಸಾಮಾನ್ಯವಾಗಿ ಕಂಡುಬಂದ ಒಂದು ಸಾಮಾನ್ಯ ಲಕ್ಷಣವೆಂದರೆ, ಕಣ್ಣು ತುಂಬಿ ಬಂದು, ನೆನಪುಗಳ ಸಾಗರ ಮಹಾಪೂರವಾದಾಗ, ಬಿಕ್ಕಿ ಬಿಕ್ಕಿ ಅತ್ತದ್ದು.